## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ.389/2020**

ಚಾಸಾ-06 ಫ್ರಾಸಾ-03

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08.04.2025

| | | |
|---|---|---|
| ಹೆಸರು | : | ರುದ್ರಪ್ಪ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ನೌಕರ |
| ವಾಸಸ್ಥಳ | : | ವಿಜಯಪೂರ. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2014 ರಿಂದ 2023 ರ ವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 03.11.2020 ರಂದು ನಾನು ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಸಾಯಂಕಾಲ 06.30 ಕ್ಕೆ ಚಾಸಾ-4 ಮತ್ತು 5 ರವರು ಹೇಳಿಕೆ ನೀಡಿರುತ್ತಾರೆ. ಒಬ್ಬ ಆರೋಪಿ, ಮುದ್ದೇ ಮಾಲು ಮತ್ತು ಪಂಚನಾಮೆಯನ್ನು ಹಾಜರುಪಡಿಸಿರುತ್ತಾರೆ. ಅವುಗಳ ಆಧಾರದ ಮೇಲೆ ನಾನು ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವ. ಋನ್ನು ಸಲ್ಲಿಸಿರುತ್ತೇನೆ. ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಚಾಸಾ-1 ರವರು ಸಲ್ಲಿಸಿರುತ್ತಾರೆ.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಒಂದು ಪೆನ್ನು, ಒಂದು ಚೀಟಿ ಮತ್ತು ರೂ.1250/-ಗಳನ್ನು ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರನಲ್ಲಿರುವುದನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.**ಮಾ-1** ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ.ವ. ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**3** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ASK ವಕೀಲರಿಂದಃ-**

ಚಾಸಾ-1 ರವರು ಮುದ್ದೇ ಮಾಲು ಮತ್ತು ಆರೋಪಿತನನ್ನು ಹಾಜರುಪಡಿಸಿದಾಗ ಸಮಯ 06.30 ಗಂಟೆ ಆಗಿತ್ತು. ಚಾಸಾ-4 ರವರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ಚಾಸಾ-1 ರಿಂದ 5 ರವರು ಮಾಹಿತಿ ಬಂದ ತಕ್ಷಣ ಸಮಯ 04.45 ಕ್ಕೆ ಹೊರಟು 05.00 ಗಂಟೆಗೆ ತಲುಪಿರುತ್ತಾರೆ ಎಂದು ಹೇಳಿಕೆಯಲ್ಲಿ ಬರೆದಿರುತ್ತೇನೆ. ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು 06.20 ಕ್ಕೆ ಪಡೆದುಕೊಂಡು 06.30 ಕ್ಕೆ ಮುಗಿಸಿರುತ್ತೇನೆ. ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು 06.30 ಕ್ಕೆ ಠಾಣೆಗೆ ಬಂದು ಮತ್ತು ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಮುದ್ದೇ ಮಾಲು ಮತ್ತು ಆರೋಪಿಯನ್ನು ಠಾಣೆಗೆ ಹಾಜರುಪಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಝಿಯಾವುದೇ ಮಾಹಿತಿ ಇರದೇ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.1250/-, ಒಂದು ಪೆನ್ನ, ಒಂದು ಮಟಕಾ ಚೀಟಿಯನ್ನು ಹೇಗೆ ತಂದರು ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಯಾವುದೇ ತನಿಖೆ ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ